ತಾರೀಖು 1ನೇ ನವಂಬರ್ 1896.

ನಂ. 4181.—ಫಾ. ಫೈ. 39—95, ಸ್ರ 78ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳ ಪ್ರಕಾರ ಮೈಸೂರ ಗವರ್ನಮೆಂಟಿನವರು ಸ್ರಸಿದ್ಧಪಡಿಸುವದೇನಂದರೆ, 1895ನೇ ಸೆಪ್ಟಂಬರ್ 4ನೇ ಮಕ್ಕಂ 2574—ಫಾ. 141ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಈ ಕೆಳಗೆ ಕಂಡ ಚಕ್ಕು ಬಂದಿ ಮಾಡಿ ಮತ್ತು ವ್ಯವಸ್ಥೆ ಮಾಡಲ್ಪಟ್ಟ ಪ್ಲಾಂಟೇರ್ಸ್ ಮೇಲ್ಕಂಡ ಫಾರೆಸ್ಟ್ ರೂಲ್ಸಿನ 1ನೇ ರೂಲ್ ಮೇರೆ "ಸ್ಟೇಟ್ ಫಾರೆಸ್ಟ್" ಆಗಿ ವಿಂಗಡಿಸಲ್ಪಡತಕ್ಕದ್ದು:—

ನಂಬರ್.	ಪ್ಲಾಂಟೇಷನಿನ ಹೆಸರು.	ವಿಸ್ತೀರ್ಣ.	ಚಕ್ಕು ಬಂದಿ.
7	ಮತ್ತಾವಾರ ಸಂದಲ್ ರಿಜರ್ವ್, ಚಿಕ್ಕಮಗಳೂರ್ ತಾಲ್ಲೂಕು, ಸರ್ವೆ ನಂಬರ್ 93 (ಮತ್ತಾವಾರ) ಮತ್ತು 3 (ದಂಬದಹಳ್ಳಿ)	ಪುಮೂರು 146 ಎಕರೆಗಳು.	ಉತ್ತರಕ್ಕೆ—3 ಅಡಿ ಅಗಲ 3 ಅಡಿ ಆಳ ಉಳ್ಳ ಕಾಲುವೆ ಮತ್ತು 9 ಅಡಿ ಅಗಲ ವುಳ್ಳ ಪಾಕ್ಕ ಮಾಡಲ್ಪಟ್ಟ ಲೈನು ಮತ್ತಾವಾರ ಗ್ರಾಮದ ಸರ್ವೆ ನಂ. 93ರಲ್ಲಿ ಬಂದು ಸ್ಥಳಬಿದಿಂದ ಹೊರಟು ಅದೇ ನಂಬರಿನ ಉದ್ದಕ್ಕೂ "ಜೊಮ್ಮನಕೆರೆ ಮತ್ತು ಚೌಡಮ್ಮನ ವನ"ಕ್ಕೆ ಶೀರಿದ ಹಾಗೆ ಉತ್ತರಕ್ಕೆ ಹೋಗುತ್ತವೆ. ಪೂರ್ವಕ್ಕೆ—ಉತ್ತರ ದಿಕ್ಕಿನಲ್ಲಿ ಕಾಲುವೆ ಮತ್ತು ಲೈನು ಕೊನೆ ಮುಟ್ಟುವ ಸ್ಥಳಗೊಂದ ಕಾಲುವೆ ಮತ್ತು ಪಾಕ್ಕಾಡಲ್ಪಟ್ಟ ಲೈನು ದಕ್ಷಿಣಕ್ಕೆ ಹೊರಟು ಮತ್ತಾವಾರ ಗ್ರಾಮದ ಸರ್ವೆ ನಂ. 93 ಮತ್ತು ದಂಬದಹಳ್ಳಿ ಗ್ರಾಮದ ನಂ. 3 ಇವುಗಳ ಉದ್ದಕ್ಕೂ ಹಾದು "ಭೈರಮ್ಮನ ಗೊಳಲಕ್ಕಿ ಕಟ್ಟೆ" ಎಂಬದಾಗಿ ಕರೆಯಲ್ಪಟ್ಟು ಬಂದು ಸ್ಥಳದಲ್ಲಿ ಅದೇ ನಂಬರಿನಲ್ಲಿ ಕೊನೆ ಮುಟ್ಟುತ್ತವೆ. ದಕ್ಷಿಣಕ್ಕೆ—"ಭೈರಮ್ಮನ ಗೊಳಲಕ್ಕಿ ಕಟ್ಟೆ" ಇಂದ ಕಾಲುವೆ ಮತ್ತು ಪಾಕ್ಕಾಡಲ್ಪಟ್ಟ ಲೈನು ಪಶ್ಚಿಮಕ್ಕೆ ತಿರುಗಿ ದಂಬದಹಳ್ಳಿಯ ಸರ್ವೆ ನಂ. 3ರ ಉದ್ದಕ್ಕೂ ಹಾದು ದಂಬದಹಳ್ಳಿಯಿಂದ ಆಲದ ಗದ್ದೆಗೆ ಹೋಗುವ ಕಾಲುದಾರಿಯನ್ನ ದಾಟಿ ಆದೇ ಗ್ರಾಮದ ಸರ್ವೆ ನಂ. 3ರಲ್ಲಿ ಕೊನೆಮುಟ್ಟುತ್ತವೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಕಾಲುವೆ ಮತ್ತು ಲೈನು ಈಶಾನ್ಯಕ್ಕೆ ತಿರುಗಿ ದಂಬದಹಳ್ಳಿಯ ಸರ್ವೆ ನಂ. 3 ಮತ್ತು ಮತ್ತಾವಾರದ ನಂ. 93 ಇವುಗಳ ಉದ್ದಕ್ಕೂ ಅವು ಹೊರಟ ಸ್ಥಳವನ್ನ ಸಂಧಿಸುವವರಿಗೂ ಹೋಗುತ್ತವೆ.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರಿಟೆರಿ.

ಪಬ್ಲಿಕ್‌ವರ್ಕ್ಸ್.

ಇಸ್ತಿಹಾರ್‌ನಾಮೆ.

ತಾರೀಖು 21ನೇ ನವಂಬರ್ 1896.

ನಂ. 919.—6099, ಮೈಸೂರ್ ಗವರ್ನಮೆಂಟಿನವರು ಈ ಕೆಳಗೆ ಕಂಡ ಮೊಕರರಾತಿಗಳನ್ನ ಮಾಡಿರುತ್ತಾರೆ:—

(1) 1ನೇ ಗ್ರೇಡ್ ಯಗ್ಜಿಕ್ಯೂಟಿವ್ ಇಂಜಿನಿಯರ್, ಇಂಪೀರಿಯಲ್, ಮೆಸ್ಟರ್ ಜಬ್ಬ್ಯೂ ಮೆಕರ್ಟಿಯವರು 3ನೇ ಕ್ಲಾಸ್ ಸೂಪರ್‌ಟೆಂಡಿಂಗ್ ಇಂಜಿನಿಯರ್ (ಲೋಕಲ್) ಆಗಿರತಕ್ಕದ್ದು. ಅವರು "ಪಶ್ಚಿಮ ಸರ್ಕಲ್"ಗೆ ನಿಯುಮಿಸಲ್ಪಟ್ಟಿರುತ್ತಾರೆ, ಅದು ಸದರೀಯವರು ಫರ್ಲೋ ರಜಾದಿಂದ ವಾಪಸ್ ಬಂದ ಮೇಲೆ ಏರ್ಪಡಿಸಲ್ಪಡುವದು.

(2) 1ನೇ ಗ್ರೇಡ್ ಯಗ್ಜಿಕ್ಯೂಟಿವ್ ಇಂಜಿನಿಯರ್, ಲೋಕಲ್, ಮೆಸ್ಟರ್ ಆರ್. ಟಿ. ಸ್ಕಾಲ್ಡ್‌ವೆಲ್‌ಯವರು 3ನೇ ಕ್ಲಾಸ್ ಸೂಪರ್‌ಟೆಂಡಿಂಗ್ ಇಂಜಿನಿಯರ್, ಲೋಕಲ್ ಆಗಿರತಕ್ಕದ್ದು. ಸದರೀಯವರು ಪ್ರಿವಿಲೀಜ್ ರಜಾದಿಂದ ವಾಪಸ್ ಬಂದ ನಂತರ ಏರ್ಪಡಿಸಲ್ಪಡತಕ್ಕ "ಪೂರ್ವ ಸರ್ಕಲ್"ಗೆ ನಿಯಮಿಸಲ್ಪಟ್ಟಿರುತ್ತಾರೆ.

(3) ಮೆಸ್ಟರ್ ಜೆ. ಜೆ. ಹ್ವೈಟ್ಟ್‌ಯವರು ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಅಸಿಸ್ಟೆಂಟ್ ಚೀಫ್ ಇಂಜಿನಿಯರ್ ಮತ್ತು ಮೈಸೂರ್ ಗವರ್ನಮೆಂಟ್ ಅಸಿಸ್ಟೆಂಟ್ ಸೆಕ್ರಿಟೆರಿಯಾಗಿರತಕ್ಕದ್ದು.

ತಾರೀಖು 26ನೇ ನವಂಬರ್ 1896.

ನಂ. 940—6200, ಎರಡನೇ ಗ್ರೇಡ್ ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಟರ್ ಸಿ. ಹಲಗೆಯ್ಯಗವ್ಡ, ಎಲ್. ಸಿ. ಈ., ಯವರು ಮೊಹೆ ಮಜಕೂರು 1ನೇ ಮಕ್ಕಂ ಲಾಗಾಯತು 3ನೇ ಗ್ರೇಡಿಗೆ ಕಂಫರಾಕ್ಕೆ ಹಾಕಲ್ಪಟ್ಟಿರುತ್ತಾರೆ.

ತಾರೀಖು 27ನೇ ನವೆಂಬರ್ 1896.

ನಂ. 972.—6259, ಮೂರೀಕಣಿವೆ ರೆಂಜ್ ಅಫಿಷಿಯೇಟಿಂಗ್ ಯಗ್ಜಿಕ್ಯೂಟಿವ್ ಇಂಜಿನಿಯರ್ ಮೆಸ್ಟರ್ ಬಿ. ಪಿ. ರಾಘವಲುನಾಯಡುಯವರಿಗೆ ಮೂಹೆ ಮಜಕೂರು 18ನೇ ತಾರೀಖು ಲಾಗಾಯತು ಹದಿನೈದು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 30ನೇ ನವೆಂಬರ್ 1896.

ನಂ. 990.—6286, ಮೈಸೂರ್ ಪಬ್ಲಿಕ್ ವರ್ಕ್ಸ್ ವ ರೈಲ್ವೆ ಅಕೌಂಟ್‌ಗಳ ಯಗ್ಜಾಮಿನರ್ ಮೆಸ್ಟರ್ ಸೆಂಟ್‌ಜಾರ್ಜ್ ಬೂರ್ಕ್, ಎ. ಸಿ. ಈ., ಯವರಿಗೆ 1896ನೇ ಡಿಸೆಂಬರ್ ಗುರ್ರೆ ಲಾಗಾಯತು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಆರು ತಿಂಗಳ ಕಾಹಿಲೆ ರಜಾ ಕೊಡಲ್ಪಟ್ಟಿರುತ್ತೆ.

II. ಅಸಿಸ್ಟೆಂಟ್ ಎಗ್ಜಾಮಿನರ್ ಮೆಸ್ಟರ್ ಸಿ. ವರದರಾಜಪಿಳ್ಳೆಯವರು ಸದರೀ ಮೆಸ್ಟರ್ ಬೂರ್ಕ್‌ಯವರು ರಜಾದ ಮೇಲಿರುವ ಕಾಲದಲ್ಲಿ ಮೈಸೂರ್ ಪಬ್ಲಿಕ್ ವರ್ಕ್ಸ್ ವ ರೈಲ್ವೆ ಅಕೌಂಟ್‌ಗಳ ಯಗ್ಜಾಮಿನರಾಗಿ ಅಫಿಷಿಯೇಟಿಂಗ್ ತರೀಕ್ ಇರತಕ್ಕದ್ದು.

ಹುಕುಂ ಬಮೋಜೀಬ್.

ಸಿ. ಬರ್ಡ್, ಕರ್ನಲ್,

ಮೈಸೂರ್ ಗವರ್ನಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರಟೆರಿ.